ಕರ್ನಾಟಕ ವಿಧಾನ ಸಭೆ

ಗುರುವಾರ 1ನೇ ಏಪ್ರಿಲ್ 1993
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11-15 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : ಉಪಾಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿಯವರು) ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಜಾರಿ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-ಮಾನ್ಯ ಅಧ್ಯಕ್ಷರೇ, ಇವತ್ತು ಏಪ್ರಿಲ್ 1 ರಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತಂದಿದ್ದೇವೆಂದು ಹೇಳಿ, ಸರ್ಕಾರ ಘೋಷಣೆ ಮಾಡಿದೆ. ಎಷ್ಟರ ಮಟ್ಟಿಗೆ ಇವರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದ್ದಾರೆ ಎನ್ನತಕ್ಕದ್ದು ಇದುವರೆಗೂ ಗೊತ್ತಿಲ್ಲ. ಸುಮ್ಮನೆ ರಸ್ತೆ ರಸ್ತೆಯಲ್ಲಿ ನಾಮಫಲಕಗಳನ್ನು ಹಾಕಿ ಇಬ್ಬರ ಚಿತ್ರಗಳನ್ನು ಹಾಕಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಚಿತ್ರ, ಮತ್ತು ಕನ್ನಡ ಸಂಸ್ಕೃತಿಯ ಇಲಾಖೆಯ ಸಚಿವರಾದಂಥ ಮಾನ್ಯ ವಿಶ್ವನಾಥರವರ ಚಿತ್ರವನ್ನು ಹಾಕಿ ಇಂದಿನಿಂದ ಕನ್ನಡ ಜಾಗೃತಿ ವರ್ಷ, ಅಂತ ಬೋರ್ಡ್ ಹಾಕಿದ್ದಾರೆ. ಕನ್ನಡದ ಸಮಗ್ರ ಜಾರಿಯ ಬಗ್ಗೆ ಸರ್ಕಾರದಲ್ಲಿ ಒಂದು ತೀರ್ಮಾನವಾಗಬೇಕು. ಏನು ಜಾರಿಯನ್ನು ಮಾಡಿದ್ದೇವೆ, ಯಾವ ಯೋಜನೆಯ ಪ್ರಕಾರ ಮಾಡುತ್ತಿದ್ದೇವೆ, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಎಷ್ಟರಮಟ್ಟಿಗೆ ಮಾಡಿದ್ದೇವೆಂದು ಹೇಳಬೇಕು. ಬರಿ ನಾಮಫಲಕವನ್ನು ಹಾಕಿದರೆ, ಆಗುವುದಿಲ್ಲ. ನಾನು ಎಲ್ಲಾ ಕಡೆಯೂ ನೋಡಿದ್ದೇನೆ. ಇವರು ಕನ್ನಡ ಆಡಳಿತ ಭಾಷೆ ಎಂದು ಹೇಳತಕ್ಕ ಯಾವ ಒಂದು ಕಾರ್ಯಕ್ರಮವೂ ಆಗಿಲ್ಲ. ಇವತ್ತು ವಿಧಾನಸೌಧದಿಂದ ನಾವು ರಾಜ್ಯ ಮಟ್ಟದ ಸಾಮಾನ್ಯ ಮಂಡಲ್ ಪಂಚಾಯತಿಯವರೆಗೂ ಕನ್ನಡದಲ್ಲಿ ಆಡಳಿತವನ್ನು ನಡೆಸಬೇಕೆನ್ನತಕ್ಕ ಸರ್ಕಾರದ ನಿರ್ಧಾರ ಏನಿದೆ, ಈ ನಿರ್ಧಾರದ ಪ್ರಕಾರ ಇವತ್ತು ಎಲ್ಲೆಲ್ಲಿ ನೋಡಿದರೂ ಇಂಗ್ಲೀಷ್‌ನ ನಾಮಫಲಕಗಳೇ ಇವೆ. ಇಂಗ್ಲೀಷ್‌ನಲ್ಲಿಯೇ ಆಡಳಿತ ನಡೆಯುತ್ತಿದೆ. ಆದ್ದರಿಂದ ನಾನು ತಮಗೆ ಇದು ಬರಿ ಘೋಷಣೆ ಆಗಬಾರದು, ಬರೀ ಘೋಷಣೆಯಿಂದ ಏನೂ ಆಗುವುದಿಲ್ಲ ಎಂದು ಹೇಳಿ, ಈ ಸದನದಲ್ಲಿ ಮಾನ್ಯ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಸಚಿವರು ಕುಳಿತಿದ್ದಾರೆ ಅವರು ವಿಧಾನಸೌಧದಲ್ಲಿರತಕ್ಕಂಥ ಎಲ್ಲಾ ಇಂಗ್ಲಿಷ್ ನಾಮಫಲಕಗಳಿಗೆ ನಾನು ಡಾಂಬರು ಬಳಿಯುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದರು. ಇವತ್ತು ಅವರು ಹೇಳಿದ ಬಗ್ಗೆ ಯಾವ ಪುರುಷಾರ್ಥವೂ ಸಾಧನೆಯಾಗಿಲ್ಲ. ಆದ್ದರಿಂದ ನಾನು ಈ ಸದನದಲ್ಲಿ ತಮ್ಮ ಅಪ್ಪಣೆಯನ್ನು ಪಡೆದು ಈ ಸದನಕ್ಕೆ ನಾನು ತಿಳಿಸಿ, ಕಾಯಾವಾಚಾಮನಸ ಕನ್ನಡದ ಕಾರ್ಯವನ್ನು ಮಾಡಬೇಕಾಗಿರುವುದರಿಂದ ಈ ಸರ್ಕಾರದ ಅಧೀನದಿಂದ ಈ ಸರ್ಕಾರದ ಅಪ್ಪಣೆಯನ್ನು ಪಡೆದು, ಈ ಸರ್ಕಾರದ ನಿರ್ಧಾರ ಏನಿದೆ, ಈ ಸರ್ಕಾರದ ಚಿಂತನೆ ಏನಿದೆ.

(ಗೊಂದಲ)

ಅಧ್ಯಕ್ಷರು :- ಮುಖ್ಯಮಂತ್ರಿಗಳು ಬರಲಿ ಆಮೇಲೆ ಚರ್ಚೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ :- ಅಲ್ಲಿಯವರೆಗೆ ಸರ್ಕಾರ ಪಾಲಿಸಲಿ.

ಶ್ರೀ ಕೆ.ಎಸ್. ಈಶ್ವರಪ್ಪ :- ಬರೀ ಕೇಳಿ ಕೇಳಿ ಕನ್ನಡ ಉದ್ಧಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ನಾನು ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

ಶ್ರೀ ಆರ್. ದಯಾನಂದರಾವ್ :- ಅವರು ಯಾವ ನಿಯಮದ ಪ್ರಕಾರ ಕೇಳುತ್ತಾರೆಂದು ನಮಗೆ ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮ ಅಪ್ಪಣೆಯನ್ನು ಪಡೆದುಕೊಂಡು ಮಾತನಾಡುತ್ತಿದ್ದೇನೆ. ತಮ್ಮ ಕಾರ್ಯಾಲಯಕ್ಕೆ ಬಂದಿದ್ದ. ತಾವು ನನಗೆ ಅನುಮತಿಯನ್ನು ಕೊಟ್ಟಿದ್ದೀರಿ. ಸರ್ಕಾರದ ನಿರ್ಧಾರ ಏನಿದೆ. ಅವರ ನೀತಿ ಏನಿದೆ. ಆ ನೀತಿಯನ್ನು ಕಾರ್ಯಗತ ಮಾಡಬೇಕು. ಆದ್ದರಿಂದ ನಾನು ಈಗ ಈ ಇಂಗ್ಲೀಷ್ ನಾಮಫಲಕಗಳಿಗೆಲ್ಲ ಕಪ್ಪು ಬಣ್ಣವನ್ನು ಬಳಿಯಬೇಕಾಗಿದೆ. ನಾನು ಈಗ ಕಪ್ಪು ಬಣ್ಣವನ್ನು ತಂದಿದ್ದೇನೆ. ಅದನ್ನು ಈ ಸದನಕ್ಕೆ ತೋರಿಸುತ್ತೇನೆ. ಈ ಕಪ್ಪುಬಣ್ಣ, ಕುಂಚ ಎರಡನ್ನೂ ಹಿಡಿದು ನಾನು ಈಗಲೇ ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ಹಿಡಿದು ಎಲ್ಲಾ ಮಂತ್ರಿಗಳ ಕಾರ್ಯಾಲಯದ ಮುಂದೆ ಇರತಕ್ಕಂತಹ ಇಂಗ್ಲೀಷ್ ನಾಮಫಲಕಕ್ಕೆ ನಾನು ಕಪ್ಪು ಬಣ್ಣವನ್ನು ಬಳಿಯುವುದಕ್ಕೆ ಹೊರಟಿದ್ದೇನೆ. ಕನ್ನಡದ ಬಗ್ಗೆ ಬರೀ ಘೋಷಣೆಯಾಗಬಾರದು. ಇದು ಬಳಿಯುವುದಕ್ಕೆ ಇದು ಕಪ್ಪು ಬಣ್ಣ ! ಏಕೆಂದರೆ ಕನ್ನಡ ಅಂದ ಮೇಲೆ ಸರ್ಕಾರ ಇರಬೇಕಲ್ಲ, ಸರ್ಕಾರದ್ದು ಒಂದು ನೀತಿ ಇರಬೇಕಲ್ಲ, ಸುಮ್ಮನೆ ಬರೀ ನಾಮಫಲಕವನ್ನು ಹಾಕಿಬಿಟ್ಟರೆ ಆಗುವುದಿಲ್ಲ. ಅದಕ್ಕೆ ಕಪ್ಪುಬಣ್ಣವನ್ನು ಬಳಿಯುವುದಕ್ಕೆ ಹೊರಟಿದ್ದೇನೆ. ಕನ್ನಡದ ಬಗ್ಗೆ ಅಭಿಮಾನ ಇರುವಂತಹ ಮಂತ್ರಿಗಳು ನನ್ನ ಜೊತೆಯಲ್ಲಿ ಬನ್ನಿ. ನಿಮಗೆ ಕನ್ನಡದ ಬಗ್ಗೆ ಅಭಿಮಾನವಿದ್ದರೆ, ಇಲ್ಲ ಅಂತ ಅಂದರೆ ನೀವು ಇಲ್ಲೇ ಕುಳಿತುಕೊಳ್ಳಿ. ಮಂತ್ರಿಗಳು, ಶಾಸಕರು ಯಾರು ಬೇಕಾದರೂ ಬರಬಹುದು.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್, ಮಾನ್ಯ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಹಾಗೂ ಮಾನ್ಯ ಬಾಬಾಗೌಡ ರುದ್ರಗೌಡ ಪಾಟೀಲರು ಇಂಗ್ಲೀಷ್ ನಾಮಫಲಕಗಳಿಗೆ ಕಪ್ಪುಬಣ್ಣಗಳನ್ನು ಬಳಿಯುವುದಕ್ಕೆ ಹೋದರು.)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಿನ್ನೆ ನಾನು ತಮ್ಮ ಅನುಮತಿಯನ್ನು ಪಡೆದು ಗೃಹಮಂಡಲಿಯ.....

ಅಧ್ಯಕ್ಷರು :- ತಾವು ಒಂದು ನಿಮಿಷ ಇರಿ. ವರದಿಯನ್ನು ಒಪ್ಪಿಸಿದ ಮೇಲೆ ತಾವು ಮಾತನಾಡಿ.

ವರದಿಯನ್ನೊಪ್ಪಿಸುವುದು

ಶ್ರೀ ಕೆ.ಹೆಚ್. ಹನುಮೇಗೌಡ :- ಮಾನ್ಯ ಅಧ್ಯಕ್ಷರೇ, ಅಂದಾಜು ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 231ರ ಮೇರೆಗೆ ಸಮಿತಿಯ ಪರವಾಗಿ ಕ್ಷಾಮಪರಿಹಾರ ಮಂಡಳಿಯ ರಚನೆಗೆ ಸಂಬಂಧಿಸಿದ ಎರಡನೆಯ ವಿಶೇಷ ವರದಿಯನ್ನು ಸದನದ ಮುಂದೆ ಇಡಬಯಸುತ್ತೇನೆ.

ಅಧ್ಯಕ್ಷರು :- ವರದಿಯನ್ನು ಒಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ